ಕರ್ನಾಟಕ ಸರ್ಕಾರ
# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
## ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ.

**(An Autonomous Institute under the Dept of Medical Education, Government of Karnataka)**
**Website: www.hims-hassan.org Phone/Fax No.08172-231699/231599, Email:directorhims@yahoo.com**

ಸಂಖ್ಯೆ: ಎಸ್.ಸಿ.ಹೆಚ್/ಹಿಮ್ಸ್/ನಿ.ವ/01/ಟೆ.ಹ/2015-16 ದಿನಾಂಕ: 02.06.2015

## ಬಹಿರಂಗ ಟೆಂಡರ್/ಹರಾಜು ಪ್ರಕಟಣೆ

ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಿಮ್ಸ್, ಹಾಸನ ಇಲ್ಲಿನ ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ದಿನಾಂಕ 15.06.2015 ರಂದು ಬೆಳಗ್ಗೆ 11.30 ಗಂಟೆಗೆ ಸಾರ್ವಜನಿಕ ಬಹಿರಂಗ ಟೆಂಡರ್/ಹರಾಜು ಮೂಲಕ ವಿಲೇವಾರಿಗೆ ಆಹ್ವಾನಿಸಲಾಗಿದೆ.

| ಕ್ರ ಸ | ಹರಾಜಿನ ವಿವರ | ಭದ್ರತಾ ಠೇವಣಿ | ಹರಾಜಿನ ದಿನಾಂಕ/ ಸಮಯ | ಸ್ಥಳ |
|---|---|---|---|---|
| 01 | <u>ನಿರುಪಯುಕ್ತಗೊಳಿಸಿರುವ ವಸ್ತುಗಳು :-</u><br>ಕಬ್ಬಿಣದ ವಸ್ತುಗಳು<br>ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳು<br>ಪ್ಲಾಸ್ಟಿಕ್ ವಸ್ತುಗಳು<br>ಮರದ ವಸ್ತುಗಳು<br>ಟೈರ್‌ಗಳು<br>ರೆಫ್ರಿಜರೇಟರ್‌ಗಳು | ದಿನಾಂಕ 15.06.2015 ಬೆಳಗ್ಗೆ 10.30ಕ್ಕೆ ರೂ.5000/- (ನಗದು ರೂಪದಲ್ಲಿ) ಹರಾಜಿನ ಒಂದು ಗಂಟೆ ಮೊದಲು ಪಾವತಿಸಬೇಕು | 15.06.2015 ಬೆಳಗ್ಗೆ:11.30 | ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಟ್ರಾಮ ಕೇರ್ ಸೆಂಟರ್, ಮೊದಲನೇ ಮಹಡಿ, ಹಾಸನ. |

ಹರಾಜಿನ ಷರತ್ತು ಮತ್ತಿತರ ವಿವರಗಳನ್ನು ದಿನಾಂಕ:05.06.2015ರಿಂದ ಸಂಸ್ಥೆಯ ವೆಬ್‌ಸೈಟ್ **www.hims-hassan.org** ನಿಂದ ಪಡೆದುಕೊಳ್ಳಬಹುದು.

ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಪಡೆದುಕೊಳ್ಳಬಹುದು.

ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು,
ಶ್ರೀ ಚಾಮರಾಜೇಂದ್ರ ಆಸ್ಪತ್ರೆ,
ಹಾಸನ.

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

## ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ.

### ನಿರುಪಯುಕ್ತಗೊಳಿಸಿರುವ ವಸ್ತುಗಳ ಬಹಿರಂಗ ಟೆಂಡರ್/ಹರಾಜಿನ ಬಗ್ಗೆ ಮಾಹಿತಿಗಳು.

| | | | |
|---|---|---|---|
| 01 | ಹರಾಜಿನ ಪ್ರಕಟಣೆ ದಿನಾಂಕ | : | ಸಂಖ್ಯೆ: ಎಸ್.ಸಿ.ಹೆಚ್/ಹಿಮ್ಸ್/ನಿ.ವ/01/2015-16<br>ದಿನಾಂಕ: 05.06.2015 |
| 02 | ಭದ್ರತಾ ಠೇವಣಿ | : | ರೂ.5000/-(ನಗದು ರೂಪದಲ್ಲಿ) ದಿನಾಂಕ 15.06.2015 ಬೆಳಗ್ಗೆ 10.30ಕ್ಕೆ ಹರಾಜಿನ ಒಂದು ಗಂಟೆ ಮೊದಲು ಪಾವತಿಸಬೇಕು. |
| 03 | ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ವಿಕ್ಷೇಣೆಗೆ ಅವಧಿ ಮತ್ತು ಸಮಯ | : | ದಿನಾಂಕ 05.06.2015 ರಿಂದ 13.06.2015ರವರಿಗೆ<br>ಸಮಯ ಬೆಳಗ್ಗೆ 10.00ರಿಂದ ಸಂಜೆ 5.00ರವರಿಗೆ. |
| 04 | ಹರಾಜಿನ ಸ್ಥಳ ಮತ್ತು ದಿನಾಂಕ | : | ದಿನಾಂಕ: 15.06.2015 ಬೆಳಗ್ಗೆ:11.30 ಗಂಟೆಗೆ,<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ,<br>ಟ್ರಾಮ ಕೇರ್ ಸೆಂಟರ್, ಮೊದಲನೇ ಮಹಡಿ, ಹಾಸನ. |
| 05 | ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ | : | ಸಹಾಯಕ ಆಡಳಿತಾಧಿಕಾರಿ, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ, ದೂರವಾಣಿ ಸಂಖ್ಯೆ:08172-250330. |

ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು,
ಶ್ರೀ ಚಾಮರಾಜೇಂದ್ರ ಆಸ್ಪತ್ರೆ,
ಹಾಸನ.

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,

# ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ.

## ಬಹಿರಂಗ ಟೆಂಡರ್/ಹರಾಜಿನ ಷರತ್ತು ಮತ್ತು ನಿಬಂಧನೆಗಳು

1. ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಿಮ್ಸ್, ಹಾಸನ ಇಲ್ಲಿನ ನಿರುಪಯುಕ್ತಾಗೂಳಿಸಿರುವ ವಸ್ತುಗಳನ್ನು ದಿನಾಂಕ 15.06.2015ರಂದು ಬೆಳಗ್ಗೆ 11.30ಗಂಟೆಗೆ ಸಾರ್ವಜನಿಕ ಹರಾಜು ಮಾಡುವ ಮೂಲಕ ವಿಲೇವಾರಿ ಮಾಡಲಾಗುವುದು. ಭಾಗವಹಿಸಲು ಇಚ್ಛಿಸುವ ಆಸಕ್ತಿವುಳ್ಳ ನಿರುಪಯುಕ್ತ ವಸ್ತುಗಳ ವ್ಯಾಪರಸ್ಥರು, ಸಂಸ್ಥೆಗಳು ಭಾಗವಹಿಸಬಹುದಾಗಿದೆ.

**ಸ್ಥಳ : – ಶ್ರೀ ಚಾಮರಾಜೇಂದ್ರ ಆಸ್ಪತ್ರೆ,**

**ಟ್ರಾಮ ಕೇರ್ ಸೆಂಟರ್, ಮೂದಲನೇ ಮಹಡಿ, ಹಾಸನ.**

**ವಿಷೇಶ ಸೂಚನೆ:–**

ಅ.ನಿರುಪಯುಕ್ತಗೂಳಿಸಿರುವ ವಸ್ತುಗಳನ್ನು ಹರಾಜು ಮೂಲಕ ಮಾತ್ರ ವಿಲೇವಾರಿ ಮಾಡಲಾಗುವುದು.

ಆ. ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ದಿನಾಂಕ 05.06.2015ರಿಂದ 13.06.2015ರವರಿಗೆ (ಭಾನುವಾರ ಹೊರತುಪಡಿಸಿ) ಕಛೇರಿ ವೇಳೆಯಲ್ಲಿ ಬೆಳಗ್ಗೆ 10.00ರಿಂದ ಸಂಜೆ 5.00ರೊಳಗೆ ಸಹಾಯಕ ಆಡಳಿತಾಧಿಕಾರಿ, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ ಇವರ ಅನುಮತಿಯೊಂದಿಗೆ ವೀಕ್ಷಣೆ ಮಾಡಬಹುದು.

ಇ. ನಿರುಪಯುಕ್ತಗೊಳಿಸಿದ ವಸ್ತುಗಳನ್ನು ಈ ಕೆಳಗೆ ತಿಳಿಸಿರುವ ಸ್ಥಳದಿಂದ ವಿಲೇವಾರಿ ಮಾಡಲಾಗುವುದು.

**ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಿಮ್ಸ್,**
**ಹಾಸನ–573 201.**

2. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್ಡುದಾರರು ಮೊದಲೇ ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ವೀಕ್ಷಣೆ ಮಾಡಬಹುದಾಗಿದೆ. ವೀಕ್ಷಣೆ ಮಾಡದೇ ಇರುವುದು ಪ್ರಕ್ರಿಯೆಯು ಅಂತಿಮಗೊಳಿಸಿದ ಮೇಲೆ ಯಾವುದೇ ತಕರಾರಿಗೆ ಕಾರಣವಾಗುವುದಿಲ್ಲ.
3. ಯಶಸ್ವಿ ಬಿಡ್ಡುದಾರರು ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ಪ್ರಕ್ರಿಯೆಯು ಮುಗಿದ ನಂತರ 7 ದಿನದಳೊಳಗೆ ಒಂದೇ ಕಂತಿನಲ್ಲಿ ವಿಲೇವಾರಿ ಮಾಡಿಕೊಳ್ಳಬೇಕಾಗಿರುತ್ತದೆ.
4. ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ದಿನಾಂಕ 15.06.2015 ಹರಾಜಿನಲ್ಲಿ ಭಾಗವಹಿಸುವ ಒಂದು ಗಂಟೆ ಮೊದಲು ಅಂದರೆ ಬೆಳ್ಳಗೆ 10.30ಕ್ಕೆ ಮುಂಗಡ ಭದ್ರತಾ ಠೇವಣಿಯಾಗಿ ರೂ.5000.00ಗಳನ್ನು ನಗದು ರೂಪದಲ್ಲಿ ಸಹಾಯಕ ಆಡಳಿತಾಧಿಕಾರಿಗಳು, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ ಇವರಲ್ಲಿ ಪಾವತಿಸಿ ರಶೀದಿ ಪಡೆಯುವುದು.

5. ಪಾವತಿಸಿದ ಮುಂಗಡ ಭದ್ರತಾ ಠೇವಣಿ ರೂ.5000ಗಳನ್ನು ಯಶಸ್ವಿಯಾಗದ ಬಿಡ್ಡುದಾರರಿಗೆ ಅದೇ ದಿನ ಮರುಪಾವತಿ ಮಾಡಲಾಗುವುದು.
6. ಯಶಸ್ವಿ ಬಿಡ್ಡುದಾರರ ಭದ್ರತಾ ಠೇವಣಿಯನ್ನು ವಿಲೇವಾರಿ ಪ್ರಕ್ರಿಯೆಯನ್ನು ತೃಪ್ತಿಕರವಾಗಿ ಪೂರೈಸಿದ ಮೇಲೆ ನೀಡಲಾಗುವುದು.
7. ಬಿಡ್ಡುದಾರರು ತಮ್ಮ ಸಂಸ್ಥೆಯ ನೊಂದಣಿಯಾದ (TIN/PAN)ಬಗ್ಗೆ ದಾಖಲೆಗಳನ್ನು ಹಾಜರ್ ಪಡಿಸುವುದು. (ಕಡ್ಡಾಯವಲ್ಲ).
8. ಯಶಸ್ವಿ ಬಿಡ್ಡುದಾರರು, ವಿಲೇವಾರಿ ಮಾಡಿಕೊಳ್ಳಲು ಅದಕ್ಕೆ ತಗಲುವ ಕೂಲಿ, ಸಾಗಾಣಿಕೆ ವೆಚ್ಚ, ವಾಹನ, ತೂಕದ ಯಂತ್ರ ವೆಚ್ಚ ಇತ್ಯಾದಿಗಳು, ವಿಲೇವಾರಿಗೆ ಸಂಬಂಧಿಸಿದ ಎಲ್ಲಾ ತರಹದ ವೆಚ್ಚಗಳನ್ನು ತಾವೇ ಭರಿಸಿಕೊಳ್ಳವುದು.
9. ನಿರುಪಯುಕ್ತ ವಸ್ತುಗಳ ವಿಲೇವಾರಿಯ ಅಂದಾಜು ತೂಕ ಮತ್ತು ಮಾರುಕಟ್ಟೆ ದರವನ್ನು ಈ ಕೆಳಗೆ ತಿಳಿಸಿದೆ.

| ಕ್ರ.ಸ. | ಹರಾಜು ಮಾಡುವ ವಸ್ತುಗಳ ಹೆಸರು | ಅಂದಾಜು ತೂಕ | ಮಾರುಕಟ್ಟೆ ದರ ರೂ. (ಕೆ.ಜಿ /ಒಂದಕ್ಕೆ) |
|---|---|---|---|
| 1. | ಕಬ್ಬಿಣದ ವಸ್ತುಗಳು | 3550ಕೆ.ಜಿ. | ರೂ. 20ಕೆ.ಜಿ.ಗೆ |
| 2. | ಸ್ಟೈನ್‌ಲೆಸ್ ಸ್ಟೀಲ್ ವಸ್ತುಗಳು | 80ಕೆ.ಜಿ. | ರೂ. 50ಕೆ.ಜಿ.ಗೆ |
| 3. | ಪ್ಲಾಸ್ಟಿಕ್ ವಸ್ತುಗಳು | 1350ಕೆ.ಜಿ. | ರೂ. 21ಕೆ.ಜಿ.ಗೆ |
| 4. | ಮರದ ವಸ್ತುಗಳು | 200ಕೆ.ಜಿ. | ರೂ. 5 ಕೆ.ಜಿ.ಗೆ |
| 5. | ಟೈರ್‌ಗಳು | 37 nos. | ರೂ. 40 ಒಂದಕ್ಕೆ |
| 6. | ರೆಫ್ರಿಜರೇಟರ್‌ಗಳು | 3 nos. | ರೂ. 500 ಒಂದಕ್ಕೆ |

- ಭಾಗವಹಿಸಲು ಇಚ್ಚಿಸುವ ಬಿಡ್ಡುದಾರರು ಮೇಲೆ ತಿಳಿಸಿದ ಮಾರುಕಟ್ಟೆ ದರಕ್ಕಿಂತ ಕಡಿಮೆ ದರ ಬಿಡ್ಡು ಕೂಗುವಹಾಗಿಲ್ಲ.
- ಈ ಮೇಲೆ ತಿಳಿಸಿರುವ ವಸ್ತುಗಳಿಗೆ ಸಂಬಂಧಿಸಿದ ತೂಕವು ಅಂದಾಜು ತೂಕವಾಗಿದ್ದು, ಅದನ್ನು ತೂಕ ಮಾಡಿದ ನಂತರ ಬರುವ ತೂಕಕ್ಕೆ ಹಣ ಪಾವತಿಸಬೇಕು.

10. ಯಶಸ್ವಿ ಬಿಡ್ಡುದಾರರು ಅಂದಾಜು ತೂಕಕ್ಕೆ ಅನುಗುಣವಾಗಿ ಶೇಕಡ 25ರಷ್ಟು ಹಣವನ್ನು ದಿನಾಂಕ 15.06.2015 ರಂದು ಹರಾಜು ಮುಗಿದ ಮೇಲೆ ಸ್ಥಳದಲ್ಲಿಯೇ ಪಾವತಿ ಮಾಡುವುದು ಮತ್ತು ಸಹಾಯಕ ಆಡಳಿತಾಧಿಕಾರಿಗಳು, ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ, ಇವರಲ್ಲಿ ಪಾವತಿಸಿ ರಶೀದಿ ಪಡೆಯುವುದು.
11. ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರಿಗೆ ಒಪ್ಪಿಗೆ ಪತ್ರ (Confirmation Letter) ನೀಡಿದ 7 ದಿನಗಳೊಳಗೆ ಒಂದೇ ಕಂತಿನಲ್ಲಿ ವಿಲೇವಾರಿ ಮಾಡಿಕೊಳ್ಳಬೇಕಾಗಿರುತ್ತದೆ.
12. ಸರ್ಕಾರದಿಂದ ಮಾನ್ಯತೆ ಪಡೆದ (ನೊಂದಣಿಯಾದ) ತೂಕದ ಯಂತ್ರದಲ್ಲಿ ತೂಕ ಮಾಡಿಸುವುದು ಕಡ್ಡಾಯವಾಗಿರುತ್ತದೆ.

13. ನಿರುಪಯುಕ್ತಗೊಳಿಸಿರುವ ವಸ್ತುಗಳನ್ನು ಒಂದು ಲಾರಿಗೆ ತುಂಬಿಸಿದ ನಂತರ ಅದರ ತೂಕ ಯಂತ್ರ ಸಂಸ್ಥೆಯಿಂದ ಬಂದ ತೂಕಕ್ಕೆ ಬಿಡ್ಡಮಾಡಿದ ದರಕ್ಕೆ ಮೊದಲು ಹಣವನ್ನು ನಗದು ರೂಪದಲ್ಲಿ ಪಾವತಿಸುವುದು, ನಂತರ ಎರಡನೇ ಬಾರಿ ವೀಲೆವಾರಿಗೆ ಅವಕಾಶ ಕಲ್ಪಿಸಲಾಗುವುದು.
14. ವಿಲೇವಾರಿ ಸಮಿತಿಯು ಹರಾಜು ಪ್ರಕ್ರಿಯೆಗೆ ಸಂಬಂದಿಸಿದಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.
15. ಟೆಂಡರನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ /ತಿರಸ್ಕರಿಸುವ/ ಮುಂದೂಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.
16. ಯಶ್ವಸಿ ಬಿಡ್ಡುದಾರರು ವಿಲೇ ಮಾಡುವಾಗ ಪರಿಸರಕ್ಕೆ ಅಥವಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕಾನೂನುಬದ್ಧವಾಗಿ ಪಾಲಿಸಲು ಸೂಚಿಸಿದೆ.
17. ಈ ಮೇಲಿನ ನಿಯಮ/ ನಿಬಂಧನೆಗಳ ಜೊತೆಗೆ ಸರ್ಕಾರದಿಂದ ಸೇರ್ಪಡೆಗೊಳಿಸುವ ನಿಯಮಗಳು ಯಾವುದಾದರು ಇದ್ದಲ್ಲಿ ಒಪ್ಪಿಕೊಳ್ಳಬೇಕಿರುತ್ತದೆ. ಯಾವುದಾದರು ಸಾಮಾನ್ಯ ನಿಯಮಗಳು ಬಿಟ್ಟು ಹೋಗಿದ್ದಲ್ಲಿ ಹರಾಜಿನ ನಂತರ ಸೇರ್ಪಡೆಗೊಳಿಸಲು ಸಂಸ್ಥೆಯ ಮುಖ್ಯಸ್ಥರಿಗೆ ಅಧಿಕಾರವನ್ನು ಕಾಯ್ದಿರಿಸಲಾಗಿದೆ.

ಜಿಲ್ಲಾ ಶಸ್ತ್ರ ಚಿಕಿತ್ಸಕರು/ ವೈದ್ಯಕೀಯ ಅಧೀಕ್ಷಕರು,
ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ.

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.